ಸಂಪುಟ : 40 ಸಂಚಿಕೆ:342 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 10 ಜನವರಿ 2018 ಬುಧವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | Tumakuru

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

# ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್

ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
Web : prajapragathi.com



**ಮಾಧ್ಯಮಗಳ ಕೆಲ ತಪ್ಪು ವರದಿಗಾಗಿ ಮಾನಹಾನಿ ಪ್ರಕರಣ ದಾಖಲಿಸಬಾರದು : ಸುಪ್ರೀಂ**
ವಿವರ : ಪುಟ 5

**ಬಗರ್‌ಹುಕುಂ ಭೂ ಹಗರಣ : ಮಾಜಿ ಡಿಸಿಎಂ ಆರ್.ಅಶೋಕ್ ವಿರುದ್ಧ ಎಫ್‌ಐಆರ್**
ವಿವರ : ಪುಟ 5





**ಎಚ್‌ಡಿಕೆ ವಿರುದ್ಧ ಮಾನನಷ್ಟ ಮೊಕದ್ದಮೆ: 1 ಕೋಟಿ ರೂ. ಪರಿಹಾರಕ್ಕೆ ದಾವೆ**
ವಿವರ : ಪುಟ 5

**ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಕಡ್ಡಾಯವಲ್ಲ; ಆದೇಶ ಬದಲಿಸಿದ ಸುಪ್ರೀಂಕೋರ್ಟ್**
ವಿವರ : ಪುಟ 5



Gold 916 ₹ 2785/–
Silver ₹41000/–
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

ವೆಂಕೋಬ್ ಕೋಳಿ ಧಾರಣೆ
ಫಾರಂ ಕೋಳಿ 1 ಕೆಜಿಗೆ ರೂ.85 / -
ರಿಟೈಲ್ ಮಾರಾಟದ ದರ ಕೆ.ಜಿ.ಗೆ ರೂ. 103 / -
ವಿತ್‌ಸ್ಕಿನ್ ರೂ.149 / - | ವಿತೌಟ್ ಸ್ಕಿನ್ ರೂ.170 / -
ಡಜನ್ ಮೊಟ್ಟೆಗೆ ರೂ.55 / -

## ರತ್ನಪ್ರಭಾ ಬಗ್ಗೆ ಪ್ರಧಾನಿ ಮೆಚ್ಚುಗೆ



ನವದೆಹಲಿ
ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ಅವರ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ರತ್ನಪ್ರಭಾ ರಾಯಚೂರು ಜಿಲ್ಲಾಧಿಕಾರಿಯಾಗಿದ್ದ ವೇಳೆ ಕಾರಿನಲ್ಲಿ ಹೋಗುತ್ತಿದ್ದಾಗ ಕುರಿ ಕಾಯುತ್ತಿದ್ದ ಬಾಲಕನನ್ನು ಕಂಡು ಕರೆದು ಶಾಲೆಗೆ ಸೇರಿಸಿದ್ದರು. ಆ ಬಾಲಕ ಈಗ ಪೊಲೀಸ್ ಪೇದೆಯಾಗಿ ಸೇವೆ ಸಲ್ಲಿಸುತ್ತಿದ್ದಾನೆ ಎಂಬ ಮಾಹಿತಿ ಆಧರಿಸಿ ರತ್ನಪ್ರಭಾ ಅವರನ್ನು ಪ್ರಧಾನಿ ಶ್ಲಾಘಿಸಿದ್ದಾರೆ.

## ಯೂಸೂಫ್ ಪಠಾಣ್‌ಗೆ 5 ತಿಂಗಳ ನಿಷೇಧ



ನವದೆಹಲಿ
ಭಾರತ ಕ್ರಿಕೆಟ್ ತಂಡದ ಆಲ್ ರೌಂಡರ್ ಯೂಸೂಫ್ ಪಠಾಣ್ ಡೋಪಿಂಗ್ ಟೆಸ್ಟ್‌ನಲ್ಲಿ ಸಿಕ್ಕಿಬಿದ್ದಿದ್ದು, ಬಿಸಿಸಿಐ 5 ತಿಂಗಳ ನಿಷೇಧ ಹೇರಿದೆ. ಪಠಾಣ್ ದೇಹದಲ್ಲಿ ನಿಷೇಧಿತ ಮಾದಕ ವಸ್ತುವಿನ ಅಂಶ ಕಂಡುಬಂದಿದೆ ಎಂದು ವೈದ್ಯರು ವರದಿಯಲ್ಲಿ ತಿಳಿಸಿದ್ದಾರೆ. ಆ್ಯಂಟಿ ಡೋಪಿಂಗ್ ನಿಯಮ ಉಲ್ಲಂಘಿಸಿರುವ ಆಪಾದನೆ ಮೇರೆಗೆ ನಿಷೇಧ ಹೇರಲಾಗಿದೆ.

## ಸ್ವಂತ ದುಡ್ಡಲ್ಲಿ ವಿದೇಶ ಪ್ರವಾಸವೇ?



ಮಡಿಕೇರಿ
ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಸ್ವಂತ ದುಡ್ಡಲ್ಲಿ ವಿದೇಶ ಪ್ರವಾಸ ಮಾಡುತ್ತಿದ್ದಾರೆಯೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ. ಸರ್ಕಾರಿ ದುಡ್ಡಲ್ಲಿ ಸಾಧನಾ ಸಮಾವೇಶ ಮಾಡುತ್ತಿದ್ದಾರೆಂಬ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿರುವ ಸಿ.ಎಂ. ಹಾಗಾದರೆ ಪ್ರಧಾನಿ ಮೋದಿ ಯಾರ ದುಡ್ಡಲ್ಲಿ ವಿದೇಶಿ ಪ್ರವಾಸ ಮಾಡುತ್ತಿದ್ದಾರೆ? ಅವರು ಸ್ವಂತ ಹಣದಲ್ಲಿ ವಿಮಾನದಲ್ಲಿ ಓಡಾಡುತ್ತಾರಾ ಎಂದು ಪ್ರಶ್ನಿಸಿದ್ದಾರೆ.

## ಅಂಕು ಡೊಂಕು

ಚನ್ನೇನಹಳ್ಳಿ ಶಿವರಾಜ್
ನೆಮ್ಮದಿ ಜೀವನಾ ?



ರೀ.. ನೀವು ಚೆನ್ನಾಗಿ ದುಡಿದರೆ ವಾರಕ್ಕೆ ಒಂದು ಸಲ ಮೂಳೆ ಸಾರು, ಇಲ್ಲ ಅಂದ್ರೆ ಪ್ರತಿ ದಿನ ಬೇಳೆ ಸಾರು ಅಷ್ಟೆ.

### ರಾಜ್ಯದ ಅಧಿಕಾರಿಗಳ ಜೊತೆ ಪ್ರಥಮ ಸಭೆ ನಡೆಸಿದ ಆಯೋಗ

# ಏಪ್ರಿಲ್ - ಮೇ ತಿಂಗಳಲ್ಲಿ ಚುನಾವಣೆ

ಬೆಂಗಳೂರು
ರಾಜ್ಯದಲ್ಲಿ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆ ನಡೆಸುವ ಸಂಬಂಧ ಕೇಂದ್ರ ಚುನಾವಣಾ ಆಯೋಗ ವಿದ್ಯುಕ್ತವಾಗಿ ಪ್ರಕ್ರಿಯೆ ಆರಂಭಿಸಿದೆ.

ಏಪ್ರಿಲ್ ಕೊನೆಯ ವಾರ ಮತ್ತು ಮೇ ಮೊದಲ ವಾರದಲ್ಲಿ ಎರಡು ಹಂತಗಳಲ್ಲಿ ಚುನಾವಣೆ ನಡೆಸಲು ಆಯೋಗ ಉದ್ದೇಶಿಸಿದ್ದು, ಈ ಸಂಬಂಧ ಸೂಕ್ತ ಸಮಯದ ಬಗ್ಗೆ ರಾಜ್ಯದ ಅಧಿಕಾರಿಗಳ ಜತೆ ಆಯೋಗದ ಅಧಿಕಾರಿಗಳೂ ಸಭೆ ನಡೆಸಿದರು.

ಕೇಂದ್ರ ಚುನಾವಣಾ ಆಯೋಗದ ಉಪ ಆಯುಕ್ತ ಉಮೇಶ್ ಸಿನ್ಹಾ ಮತ್ತು ಸಂದೀಪ್ ಸಕ್ಸೇನಾ ಅವರಿಂದು ರಾಜ್ಯದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ರಾಜ್ಯದಲ್ಲಿ ಮಳೆ, ಬಿಸಿಲು, ಪ್ರತಿಕೂಲ ಹವಾಮಾನ ಪರಿಸ್ಥಿತಿ, ಸರ್ಕಾರಿ ಸಿಬ್ಬಂದಿ, ಭದ್ರತಾ ಸಿಬ್ಬಂದಿಯ ಬಗ್ಗೆ ಮಾಹಿತಿ ಪಡೆದರು. ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಆರಂಭಿಸುವಂತೆಯೂ ನಿರ್ದೇಶನ ನೀಡಿದರು.

ಎರಡು ದಿನಗಳ ಕಾಲ ಅಧಿಕಾರಿಗಳೊಂದಿಗೆ ಚುನಾವಣಾ ಸಿದ್ಧತೆಗಳು, ಚುನಾವಣೆಗಳನ್ನು ಯಾವಾಗ ನಡೆಸಬಹುದು, ಕಾನೂನು ಸುವ್ಯವಸ್ಥೆಯ ಪರಿಸ್ಥಿತಿ ಸೇರಿದಂತೆ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆ ನಡೆಸಲು ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಪಡೆಯಲಿದ್ದಾರೆ.

ಎರಡು ದಿನಗಳ ಕಾಲ ಅಧಿಕಾರಿಗಳೊಂದಿಗೆ ಚುನಾವಣಾ ಸಿದ್ಧತೆ, ಚುನಾವಣೆಗಳಿಗೆ ಕೇಂದ್ರ





ಚುನಾವಣಾ ಆಯೋಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಇವರುಗಳು ಚರ್ಚೆ ನಡೆಸಲಿದ್ದಾರೆ. ಚುನಾವಣಾ ಪೂರ್ವದಲ್ಲಿ ನಡೆದಿರುವ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದ ಪ್ರಗತಿ, ಪಟ್ಟಿ ಪರಿಷ್ಕರಣೆ ಸಮರ್ಪಕವಾಗಿ ನಡೆದಿದೆಯೇ ಎಂಬ ಬಗ್ಗೆಯೂ ರಾಜ್ಯ ಚುನಾವಣಾ ಅಧಿಕಾರಿಗಳೊಂದಿಗೆ ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ಸಭೆ ನಡೆಸುವರು.

**ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ:** ರಾಜ್ಯ ಚುನಾವಣಾ ಆಯೋಗದ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಮೂರನೇ ದಿನ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಚುನಾವಣೆಯ ಬಗ್ಗೆ ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ಸಭೆ ನಡೆಸಿ, ಚುನಾವಣೆಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಅಹವಾಲುಗಳನ್ನು ಆಲಿಸಲಿದ್ದಾರೆ.

**ಕೇಂದ್ರ ಚುನಾವಣಾ ಆಯುಕ್ತರ ಭೇಟಿ:** ರಾಜ್ಯಕ್ಕೆ ಭೇಟಿ ನೀಡಿರುವ ಕೇಂದ್ರ ಚುನಾವಣಾ ಆಯೋಗದ ಉಪ ಆಯುಕ್ತರು ಹಾಗೂ ಅಧಿಕಾರಿಗಳ ತಂಡ ಮಾಹಿತಿಗಳನ್ನು ಕಲೆ ಹಾಕಿ ರಾಜ್ಯ ವಿಧಾನಸಭಾ ಚುನಾವಣೆಯ ಬಗ್ಗೆ ಕೇಂದ್ರ ಚುನಾವಣಾ ಆಯೋಗದ ಆಯುಕ್ತರಿಗೆ ಸಮಗ್ರ ವರದಿ ನೀಡಲಿದ್ದು, ಆ ವರದಿ ಸಲ್ಲಿಕೆ ನಂತರ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತರು ರಾಜ್ಯಕ್ಕೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿ, ನಂತರ ರಾಜ್ಯದಲ್ಲಿ ಚುನಾವಣಾ ದಿನಾಂಕವನ್ನು ನಿಗದಿ ಮಾಡುವರು.

> ರಾಜ್ಯದಲ್ಲಿ ಮಳೆ, ಬಿಸಿಲು, ಪ್ರತಿಕೂಲ ಹವಾಮಾನ ಪರಿಸ್ಥಿತಿ, ಸರ್ಕಾರಿ ಸಿಬ್ಬಂದಿ, ಭದ್ರತಾ ಸಿಬ್ಬಂದಿಯ ಬಗ್ಗೆ ಮಾಹಿತಿ ಪಡೆದರು. ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಆರಂಭಿಸುವಂತೆಯೂ ನಿರ್ದೇಶನ ನೀಡಿದ್ದು, ಎರಡು ದಿನಗಳ ಕಾಲ ಅಧಿಕಾರಿಗಳೊಂದಿಗೆ ಚುನಾವಣಾ ಸಿದ್ಧತೆಗಳು, ಚುನಾವಣೆಗಳನ್ನು ಯಾವಾಗ ನಡೆಸಬಹುದು, ಕಾನೂನು ಸುವ್ಯವಸ್ಥೆಯ ಪರಿಸ್ಥಿತಿ ಸೇರಿದಂತೆ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆ ನಡೆಸಲು ಅಗತ್ಯವಾದ ಎಲ್ಲ ಮಾಹಿತಿಗಳನ್ನು ಪಡೆಯಲಿದ್ದಾರೆ.

# ಬಜೆಟ್ ಮಂಡನೆಗೆ ತಾಲೀಮು

### ಜ.19ರಿಂದ ಇಲಾಖಾ ಮುಖ್ಯಸ್ಥರು - ಅಧಿಕಾರಿಗಳೊಂದಿಗೆ ಸಭೆ



ಬೆಂಗಳೂರು
ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2018-19 ನೇ ಸಾಲಿನ ರಾಜ್ಯ ಬಜೆಟ್ ಪೂರ್ವಭಾವಿ ಇಲಾಖಾವಾರು ಸಭೆಗಳನ್ನು ಜನವರಿ 9 ರಿಂದ ನಡೆಸುವುದರೊಂದಿಗೆ ಮುಖ್ಯಮಂತ್ರಿಯಾಗಿ ತಮ್ಮ ಆರನೇ ಹಾಗೂ ರಾಜ್ಯದ ಹಣಕಾಸು ಸಚಿವರಾಗಿ ತಮ್ಮ ಹದಿಮೂರನೇ ಆಯವ್ಯಯ ಮಂಡನೆಗೆ ತಾಲೀಮು ಪ್ರಾರಂಭಿಸಲಿದ್ದಾರೆ ಪ್ರಪ್ರಥಮವಾಗಿ ಜನವರಿ 18 ರಂದು ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿಯವರು ರೈತ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸುವುದರೊಂದಿಗೆ ರಾಜ್ಯ ಮುಂಗಡ ಪತ್ರದ ತಯಾರಿ ಪ್ರಾರಂಭವಾಗಲಿದೆ. ಜನವರಿ 19 ರಿಂದ ಫೆಬ್ರವರಿ 1 ರವರೆಗೆ ವಿವಿಧ ಇಲಾಖೆಗಳ ಮುಖ್ಯಸ್ಥರು ಹಾಗೂ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆಗಳು ಕರ್ನಾಟಕ ವಿದ್ಯುತ್ ನಿಗಮದ ಶಕ್ತಿ ಭವನದ ಸಭಾಂಗಣದಲ್ಲಿ ನಡೆಯಲಿವೆ.

ಜನವರಿ 19 ರಂದು ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಉನ್ನತ ಶಿಕ್ಷಣ, ಕಾರ್ಮಿಕ, ಕೌಶಲ್ಯಾಭಿವೃದ್ಧಿ, ಅರಣ್ಯ, ಪರಿಸರ ಮತ್ತು ಜೀವಿ ಶಾಸ್ತ್ರ, ಇಂಧನ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಯಲಿದೆ. ತದ ನಂತರ, ಜನವರಿ 20 ರಂದು ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕಂದಾಯ ವ್ಯಾಪ್ತಿಗೆ ಒಳಪಟ್ಟ ಮುಜರಾಯಿ, ಜವಳಿ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಔಕಾಫ್ ಸೇರಿದಂತೆ ಅಲ್ಪಸಂಖ್ಯಾತರ ಕಲ್ಯಾಣ, ಜನವರಿ 22 ರಂದು ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ಸಣ್ಣ ನೀರಾವರಿ ಸೇರಿದಂತೆ ಜಲ ಸಂಪನ್ಮೂಲ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ತೋಟಗಾರಿಕೆ, ಕೃಷಿ ಮಾರು ಕಟ್ಟೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮೀನುಗಾರಿಕಾ ಇಲಾಖೆಗಳ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆಗಳು ನಡೆಯಲಿವೆ.

ಅದೇ ರೀತಿ ಜನವರಿ 25 ರಂದು ಕೃಷಿ, ಆಹಾರ ಸಂಸ್ಕರಣೆ, ಪಶುಸಂಗೋಪನೆ, ರೇಷ್ಮೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಇ-ಆಡಳಿತ ಒಳಗೊಂಡಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಜನವರಿ 30 ರಂದು ಸಹಕಾರ, ವಸತಿ, ಸಾರ್ವಜನಿಕ ಉದ್ದಿಮೆಗಳು, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನೆ ಹಾಗೂ ಮಹಾನಗರ ಪಾಲಿಕೆಗಳು ಒಳಗೊಂಡಂತೆ ನಗರಾಭಿವೃದ್ಧಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ವ್ಯಾಪ್ತಿಯ ಹಜ್, ಜನವರಿ 31 ರಂದು ಗೃಹ, ಲೋಕೋಪಯೋಗಿ, ಸಾರಿಗೆ, ಯೋಜನೆ ಮತ್ತು ಕಾರ್ಯಕ್ರಮ ಅನುಷ್ಠಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಹಾಗೂ ಫೆಬ್ರವರಿ 1 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಂದಾಯ, ವಾಣಿಜ್ಯ ಮತ್ತು ಕೈಗಾರಿಕಾ ವ್ಯಾಪ್ತಿಯ ಸಣ್ಣಕೈಗಾರಿಕೆ, ಸಕ್ಕರೆ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳ ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಯಲಿದೆ. ಅಂತೆಯೇ, ಫೆಬ್ರವರಿ 2 ರಂದು ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ವಾಣಿಜ್ಯ ಸಂಘ >>> 5ನೇ ಪುಟಕ್ಕೆ

# ಒತ್ತಡ ಜೀವನಕ್ಕೆ ಕ್ರೀಡೆಗಳು ಚೇತೋಹಾರಿ

ತುಮಕೂರು
ಯಾವುದೇ ಪಕ್ಷದ ಸರ್ಕಾರವಿದ್ದರೂ ಪಕ್ಷಾತೀತರಾಗಿ ಶ್ರದ್ಧೆ, ಪ್ರಾಮಾಣಿಕತೆಯಿಂದ ತಮ್ಮ ಕರ್ತವ್ಯವನ್ನು ಒತ್ತಡಗಳಿಂದ ನಿಭಾಯಿಸುವ ಸರಕಾರಿ ನೌಕರರಿಗೆ ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಅತ್ಯಂತ ಚೇತೋಹಾರಿಯಾದುದು ಎಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ತುಮಕೂರು ಜಿಲ್ಲಾ ಶಾಖೆಯ ಅಧ್ಯಕ್ಷ ಕೆ.ಹೆಚ್.ಲೋಕೇಶ್ ಅವರು ಅಭಿಪ್ರಾಯಪಟ್ಟರು.

ಅವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ತುಮಕೂರು ಹಾಗೂ ಕರ್ನಾಟಕ ರಾಜ್ಯ ಸರಕಾರಿ ನೌಕರರ ಜಿಲ್ಲಾ ಸಂಘ ತುಮಕೂರು ಇವರ ಜಂಟಿ ಆಶ್ರಯದಲ್ಲಿ ತುಮಕೂರು ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಜಿಲ್ಲಾ ಮಟ್ಟದ ರಾಜ್ಯ ಸರಕಾರಿ ನೌಕರರ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.

ಮಾನ್ಯ ಮುಖ್ಯಮಂತ್ರಿಗಳು 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ನೌಕರರಿಗೆ ಅನ್ಯಾಯವಾಗದಂತೆ ಜಾರಿಗೆ ತರಲಿದ್ದಾರೆ ಎಂದು ಅವರು ಆಶಾಭಾವನೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಪರಮಶಿವಯ್ಯ ಅವರು ಮಾತನಾಡಿ, ರಾಜ್ಯ ಸರ್ಕಾರದ ವಿವಿಧ ಜನಪರ ಯೋಜನೆಗಳನ್ನು ಯಶಸ್ವಿಗೊಳಿಸುವಲ್ಲಿ ಜನರಿಗೆ ತಲುಪಿಸುವ ಕೆಲಸವನ್ನು ಮಾಡುವವರು ಸರಕಾರಿ ನೌಕರರು. ಆದ್ದರಿಂದ ಸರ್ಕಾರದ ಏಳು-ಬೀಳು ಸರಕಾರಿ ನೌಕರರ ಮೇಲೆ ಅವಲಂಬಿತವಾಗಿದೆ, ಈ ದಿಸೆಯಲ್ಲಿ ಮುಖ್ಯಮಂತ್ರಿಗಳು ನೌಕರರ ಮೇಲೆ ವಿಶ್ವಾಸವನ್ನು ಹೊಂದಿದ್ದಾರೆ ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಸಂಘದ ಉಪಾಧ್ಯಕ್ಷ ವೀರಕ್ಯಾತರಾಯ ಅವರು ಮಾತನಾಡಿ, ನೌಕರರು ಕ್ರೀಡಾ ಮನೋಭಾವದಿಂದ ಭಾತೃತ್ವ ತತ್ವದಲ್ಲಿ ಕ್ರೀಡೆಗಳಲ್ಲಿ ಭಾಗವಹಿಸಲು ತಿಳಿಸಿ, 6ನೇ ವೇತನ ಆಯೋಗದ ಶಿಫಾರಸುಗಳು ನೌಕರರ ಆಸೆಗಳನ್ನು ಈಡೇರಿಸಲಿವೆ ಎಂದರು.

ಸಮಾರಂಭದಲ್ಲಿ ಮಧುಗಿರಿ, ಶಿರಾ, ಗುಬ್ಬಿ ತಾಲ್ಲೂಕುಗಳ ಸಂಘದ ಅಧ್ಯಕ್ಷರಾದ ಮಹಾಲಿಂಗೇಶ್, ಲಕ್ಷ್ಮೀಶ, ನಾಗಭೂಷಣ್, ಶಿರಾ ತಾಲ್ಲೂಕಿನ ಶಿಕ್ಷಕರ ಸಂಘದ ಅಧ್ಯಕ್ಷ ನಾಗರಾಜು, ನೌಕರರ ರಾಜ್ಯ ಪರಿಷತ್ ಸದಸ್ಯ ಸತೀಶ್ ಕುಮಾರ್, ಪಾವಗಡ ತಾಲ್ಲೂಕು ಗೌರವ ಅಧ್ಯಕ್ಷರಾದ ಹನುಮಂತರಾಯ, ಕಾರ್ಯದರ್ಶಿ ನರಸಿಂಹ ಮುಂತಾದವರು ಹಾಜರಿದ್ದರು.

ರಾಷ್ಟ್ರಮಟ್ಟದ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಗಳಿಸಿದ ಜಿಲ್ಲೆಯ ಸರ್ಕಾರಿ ನೌಕರರಾದ ಮಹೇಶ್, ಹೊನ್ನೂರು ಸ್ವಾಮಿ, ರವಿಸೂದನ, ನಾಗಭೂಷಣ್ (ಭಾರ ಎತ್ತುವ ಸ್ಪರ್ಧೆ), ಕ್ರಿಕೆಟ್‌ನಲ್ಲಿ ಎಂ.ಬಿ.ಪ್ರವೀಣ್ ಕುಮಾರ್ ಹಾಗೂ ಬ್ಯಾಡ್‌ಮಿಂಟನ್ ಕವಿತ ಇವರುಗಳನ್ನು ಸನ್ಮಾನಿಸಲಾಯಿತು. ಶಿಕ್ಷಕಿ ಜಿ.ದೇವಿಕಾ ಕಾರ್ಯಕ್ರಮ ನಿರೂಪಿಸಿದರು. ಸಂಘದ ಸಾಂಸ್ಕೃತಿಕ ವಿಭಾಗದ ಅಧ್ಯಕ್ಷೆ ಅಕ್ಕಮ್ಮ ಪ್ರಾರ್ಥಿಸಿದರು. ಕುಮಾರ್ ವಂದಿಸಿದರು.

> ತುಮಕೂರು ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಕರು ಸೇರಿದಂತೆ ಎಲ್ಲಾ ಇಲಾಖೆಗಳಲ್ಲಿ 20 ಸಾವಿರಕ್ಕೂ ಹೆಚ್ಚು ನೌಕರರು ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಇಂತಹ ಕ್ರೀಡೆಗಳನ್ನು ಏರ್ಪಡಿಸಿದಾಗ ಕೇವಲ ಬೆರಳೆಣಿಕೆಯಷ್ಟು ಭಾಗವಹಿಸುತ್ತಿದ್ದರು. ಆದರೆ ಈ ಬಾರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಸುಮಾರು 600ಕ್ಕೂ ಹೆಚ್ಚು ನೌಕರರು ವಿಶೇಷವಾಗಿ ಮಹಿಳಾ ನೌಕರರು ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿರುವುದು ಸಂತೋಷವುಂಟು ಮಾಡಿದೆ

# ಟೆಂಡರ್ ಮಾಡದೆ ತೊಗರಿ ಖರೀದಿಗೆ ಯತ್ನ

### ಶಿರಾ ಮಾರುಕಟ್ಟೆಯಲ್ಲಿ ತೊಗರಿ ಬೆಲೆ ಕುಸಿತದಿಂದ ರೈತರ ಆಕ್ರೋಶ

ಶಿರಾ
ತೊಗರಿ ಬೆಳೆಗೆ ಉತ್ತಮವಾದ ಬೆಂಬಲ ಬೆಲೆ ಸಿಗದಿದ್ದರಿಂದ ರೈತರು ಹಾಗೂ ರೈತ ಸಂಘದ ಮುಖಂಡರು ಶಿರಾ ಆರ್.ಎಂ.ಸಿ. ಮಾರುಕಟ್ಟೆಯಲ್ಲಿ ದಲ್ಲಾಳಿಗಳು ಹಾಗೂ ವರ್ತಕರ ಮೇಲೆ ಆಕ್ರೋಶ ವ್ಯಕ್ತಪಡಿಸಿದ ಪ್ರಸಂಗ ಮಂಗಳವಾರ ನಡೆಯಿತು.

ತಾಲ್ಲೂಕಿನ ವಿವಿಧ ಹೋಬಳಿಗಳಲ್ಲಿ ಪ್ರಸಕ್ತ ವರ್ಷ ಬಂದ ಉತ್ತಮ ಮಳೆಯಿಂದ ತೊಗರಿ ಬೆಳೆ ಉತ್ತಮ ಇಳುವರಿಯಾಗಿದ್ದು ಪ್ರತಿ ಮಂಗಳವಾರದ ಮಾರುಕಟ್ಟೆಗೆ ರೈತರು ತೊಗರಿಯನ್ನು ತಂದಾಗ ಬೆಂಬಲ ಬೆಲೆ ಲಭ್ಯವಾಗುತ್ತಿಲ್ಲ. ಮಂಗಳವಾರ ಕೂಡ 25,000 ಕ್ಕೂ ಹೆಚ್ಚು ಚೀಲಗಳ ತೊಗರಿ ಮಾರುಕಟ್ಟೆಗೆ ಬಂದಿದ್ದು ಬೆಂಬಲ ಬೆಲೆ ಸಿಗದ ಪರಿಣಾಮ ರೈತರು ವ್ಯಾಪಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಶಿರಾ ಭಾಗದ ರೈತರೂ ಸೇರಿದಂತೆ ಹಿರಿಯೂರು ತಾಲ್ಲೂಕಿನ ಧರ್ಮಪುರ, ಚಳ್ಳಕೆರೆ, ಪಾವಗಡ ಸೇರಿದಂತೆ ವಿವಿಧ ಭಾಗದ ರೈತರು ಶಿರಾ ಮಾರುಕಟ್ಟೆಗೆ ತೊಗರಿಯನ್ನು ತಂದಿದ್ದರು.

ಬೆಳ್ಳಂ ಬೆಳಗ್ಗೆಯೇ ರೈತರು ತಮ್ಮ ತೊಗರಿಯನ್ನು ಟೆಂಡರ್‌ಗೆ ಇಟ್ಟರಾದರೂ ಮಾರುಕಟ್ಟೆಗೆ ಬಂದಿದ್ದ ದಲ್ಲಾಳರು ಹಾಗೂ ಕೆಲ ಮಂಡಿ ವರ್ತಕರು ತೊಗರಿಯನ್ನು ಟೆಂಡರ್ ಮಾಡದೆಯೇ ಕ್ವಿಂಟಾಲ್‌ಗೆ 2100 ರಿಂದ 3400 ರೂಗಳವರೆಗೆ ಕೊಂಡುಕೊಂಡ ಪರಿಣಾಮ ರೈತರಿಗೆ ಬೆಂಬಲ ಬೆಲೆ ಲಭ್ಯವಾಗದೆ ಪರಿತಪಿಸುವಂತಾಯಿತು.

ತೊಗರಿಯ ಬೆಲೆ ಕುಸಿತಗೊಂಡ ಸುದ್ದಿ ತಿಳಿದ ರೈತ ಸಂಘದ ಜಿಲ್ಲಾ ಗೌ|| ಅಧ್ಯಕ್ಷ ಧನಂಜಯಾರಾಧ್ಯ, ತಾ|| ಅಧ್ಯಕ್ಷ ಪರಮಶಿವಯ್ಯ ಸೇರಿದಂತೆ ಅನೇಕ ರೈತ ಮುಖಂಡರು ರೈತರಿಗೆ ಬೆಂಬಲ ಬೆಲೆ ನೀಡುವಂತೆ ಆರ್.ಎಂ.ಸಿ. ಅಧಿಕಾರಿಗಳನ್ನು ಒತ್ತಾಯಿಸಿದರು.

ಟೆಂಡರ್ ಮಾಡದೆ ದಲ್ಲಾಳಿಗಳು ಹಾಗೂ ಮಂಡಿ ವರ್ತಕರು ಕೊಂಡುಕೊಂಡ ತೊಗರಿಯನ್ನು ಒಗ್ಗೂಡಿಸಿ ರಾಶಿ ಮಾಡಿದ್ದರಿಂದ ರೈತರು ಮಾರಾಟ ಮಾಡಿದ ತೊಗರಿಯನ್ನು ಕೂಡ ಹಿಂಪಡೆಯದಂತಹ ವಾತಾವರಣ ಸೃಷ್ಟಿಯಾಗಿತ್ತು.

ಸ್ಥಳಕ್ಕೆ ಬಂದ ಆರ್.ಎಂ.ಸಿ. ಕಾರ್ಯದರ್ಶಿ ಜಯಣ್ಣ ಎಲ್ಲಾ ರೈತರನ್ನು ಕಚೇರಿಗೆ ಕರೆದೊಯ್ದು ಸಭಾಂಗಣದಲ್ಲಿ ರೈತರು ಹಾಗೂ ದಲ್ಲಾಳಿಗಳ ಸಭೆ ಕರೆದು ಚರ್ಚಿಸಿದರು. >>> 5ನೇ ಪುಟಕ್ಕೆ



**ಮುಖ್ಯಾಂಶಗಳು**
- ಸಿರಾ ಮಾರುಕಟ್ಟೆಯಲ್ಲಿ ರೈತರ ಆಕ್ರೋಶ
- ತೊಗರಿ ಬೆಲೆ ಕುಸಿತಕ್ಕೆ ರೈತ ಸಂಘ ಆಕ್ರೋಶ
- ಖರೀದಿ ಕೇಂದ್ರ ಆರಂಭಿಸಲು ಒತ್ತಾಯ
- ರೈತ ಮುಖಂಡರೊಂದಿಗೆ ಅಧಿಕಾರಿಗಳ ಸಭೆ

# ವಿಳಂಬ ಗತಿಯಲ್ಲಿ ಸಾಗಿವೆ ಭೂವಿವಾದ ಪ್ರಕರಣಗಳು

### ಜಿಲ್ಲೆ : ತಹಸೀಲ್ದಾರ್ ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕೆ ಕಾಯುತ್ತಿವೆ 3445 ಕೇಸ್‌ಗಳು

■ ಭೂಷಣ್ ಮಿಡಿಗೇಶಿ

ತುಮಕೂರು
ಕಳೆದ ವರ್ಷ ಇಡೀ ಜಿಲ್ಲೆಯಾದ್ಯಂತ ಶಿರಾ ತಾಲ್ಲೂಕು ಹೊರತುಪಡಿಸಿ ಯಾವುದೇ ತಾಲ್ಲೂಕಿನ ತಹಸೀಲ್ದಾರ್ ಸಾಹೇಬರು ಒಂದೇ ಒಂದು ಬಾರಿಯಾದರೂ ನ್ಯಾಯಾಲಯದಲ್ಲಿ ಕುಳಿತಿಲ್ಲ..!!. ಇದು ಅಚ್ಚರಿಯ ಸಂಗತಿಯೆನಿಸಿದರೂ ಭೂಮಿಗಳ ಸಾಕಷ್ಟು ವಿವಾದಗಳು ಬಗೆಹರಿಯುವುದು ವಿಪರೀತ ವಿಳಂಬವಾಗುತ್ತಿರುವುದು ಮಾತ್ರ ನಿತ್ಯಸತ್ಯ. ಎಷ್ಟೋ ಪ್ರಕರಣಗಳು ಬೆಳಕಿಗೆ ಬಾರದೆ ನ್ಯಾಯಾಲಯಗಳ ಮೆಟ್ಟಿಲು ಹತ್ತಿ, ಫಿರ್ಯಾದಿ ಸಾಯುವವರೆಗೂ ಕೇಸುಗಳು ಮುಗಿಯದೆ ಸತಾಯಿಸಿರುವ ಉದಾಹರಣೆಗಳೂ ಇವೆ. ಸತ್ತವರ ಹೆಸರಿನಲ್ಲಿರುವ ಭೂಮಿಯನ್ನು ಇದ್ದವರ ಹೆಸರಿಗೆ ವರ್ಗಾವಣೆ ಮಾಡಲು ಕೂಡ ಸಾಕಷ್ಟು ವಿಳಂಬಧೋರಣೆ ಅನುಸರಿಸುವ ನಿದರ್ಶನಗಳು ಇವೆ. ಕಂದಾಯ ಇಲಾಖೆಯ ಈ ವ್ಯವಸ್ಥೆ ಒಮ್ಮೊಮ್ಮೆ ಸತ್ತವರ ಜೊತೆಯಲ್ಲಿ, ಇದ್ದವರು ಸಾಯುವವರೆಗೂ ಖಾತೆ ಪಹಣಿ ಮುಂತಾದವು ಬದಲಾಗದೆ ಇರುವಂತಹ ದುರಂತಗಳೂ ಸಾಕ್ಷಿವೆ.

ಸಾವಿಗೀಡಾದ ಭೂಮಿಯ ಒಡೆಯನ ಹೆಸರಿನಲ್ಲಿರುವ ಜಮೀನಿನ ಖಾತೆ ಬದಲಾವಣೆಗೆ 30 ದಿನಗಳ ಕಾಲಾವಕಾಶವನ್ನು ನೀಡಿ, ಆಕ್ಷೇಪಣೆಗಳೇನಾದರೂ ಇದ್ದರೆ ಅದಕ್ಕೂ ಕಾಲಾವಕಾಶವನ್ನು ನೀಡಿ, ಗ್ರಾಮಗಳ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಚಾವಡಿಗಳಲ್ಲಿ ಆಕ್ಷೇಪಣೆಗಳೇನಾದರೂ ಇದ್ದರೆ ಸಂಪರ್ಕಿಸುವಂತೆ ಪ್ರಕಟಣೆಯನ್ನು ಹಾಕಿ, ಖಾತೆ ಬದಲಾವಣೆಯನ್ನು ಮಾಡಲಾಗುತ್ತದೆ. ಆದರೂ ಇಂತಹ ಪವತಿ ಖಾತೆಗಳೂ ಕೂಡಾ ವಿಳಂಬವಾಗಿ ವಂಶವೃಕ್ಷಗಳಲ್ಲಿ ಆಗುವ ಪ್ರಮಾದಗಳು, ಇನ್ಯಾರೋ ರಕ್ತಸಂಬಂಧಿಗಳು ಜಮೀನಿನ ಒಡೆತನದಲ್ಲಿ ನಮ್ಮದೂ ಪಾಲಿದೆ ಎಂಬ ದೂರುಗಳ ಮೇಲೆ ತಹಶೀಲ್ದಾರರ ನ್ಯಾಯಾಲಯಕ್ಕೆ ಪ್ರಕರಣಗಳು ದಾಖಲಾಗುತ್ತವೆ. ಭೂಮಿಗಳನ್ನು ಕೊಳ್ಳುವಾಗ, ಮಾರುವಾಗ ಉದ್ಭವಿಸಬಹುದಾದ, ತಕರಾರುಗಳು, ನೊಂದಣಿ ಸಂಬಂಧಿತ ವಿವಾದಗಳು ಕೂಡಾ ತಹಶೀಲ್ದಾರರ ನ್ಯಾಯಾಲಯದಲ್ಲಿ ದಾಖಲಾಗಿ ವರ್ಷಾನುಗಟ್ಟಲೆ ಸತಾಯಿಸುತ್ತವೆ. ಕನ್ನಡಿಯೊಳಗಿನ ಗಂಟಿನಂತೆ ಇತ್ತ ಅನುಭವಿಸಲೂ ಆಗದೆ, ಅತ್ತ ಬಿಟ್ಟುಕೊಡಲೂ ಆಗದೆ ದ್ವೇಷ ವೈಷಮ್ಯಗಳ ನಡುವೆ ಬದುಕು ಮುಗಿಸುವ ವಿಷಮ ಪರಿಸ್ಥಿತಿ ಈ ವ್ಯಾಜ್ಯಗಳಿಂದ ಬಂದೊದಗುತ್ತದೆ.

**ಕೊರಟಗೆರೆಯಲ್ಲಿ ಅತಿ ಕಡಿಮೆ ಭೂ ವಿವಾದದ ಪ್ರಕರಣಗಳು..!!!**

ಇಡೀ ಜಿಲ್ಲೆಯಲ್ಲಿರುವ ತಹಸೀಲ್ದಾರರ ನ್ಯಾಯಾಲಯಗಳ ಪ್ರಕರಣಗಳನ್ನು ಗಮನಿಸಿದರೆ ಕೊರಟಗೆರೆ ತಾಲ್ಲೂಕಿನಲ್ಲಿ ಮಾತ್ರ ಅತ್ಯಂತ ಕಡಿಮೆ ಪ್ರಕರಣಗಳು ಅಂದರೆ 97 ಮಾತ್ರ ಇತ್ಯರ್ಥವಾಗದೆ ಉಳಿದಿರುವುದು ಕಂಡುಬಂದಿದೆ. ಕಳೆದ ಮೂರು ತಿಂಗಳ ಅವಧಿಯಲ್ಲಿ ಯಾವುದೇ ಅರ್ಜಿಗಳು ನ್ಯಾಯಾಲಯಕ್ಕೆ ಸಲ್ಲಿಕೆಯಾಗಿಲ್ಲ. ಒಂದರಿಂದ ಎರಡು ವರ್ಷ ಅವಧಿಯ 34 ಮತ್ತು ಅದಕ್ಕಿಂತಲೂ ಮೇಲ್ಪಟ್ಟ ಅವಧಿಯ ವಿಚಾರಣೆಗಳು ಮುಗಿಯದ ಪ್ರಕರಣಗಳ ಸಂಖ್ಯೆ 63. ಈ 97 ಪ್ರಕರಣಗಳು ನೆನೆಗುದಿಗೆ ಬಿದ್ದಿದ್ದು ಯಾವ ಕಾಲದಲ್ಲಿ ವಿಲೇವಾರಿಯಾಗುತ್ತವೆ ಎಂಬುದು ತಿಳಿಯದು. ಕುಣಿಗಲ್ ತಾಲ್ಲೂಕಿನಲ್ಲಿ 1 ವರ್ಷದ ಒಳಗಿನ ಅರ್ಜಿಗಳು ಯಾವುವೂ ಇಲ್ಲವೆಂದು ಮಾಹಿತಿಯಿದೆ. ಒಂದರಿಂದ ಎರಡು ವರ್ಷ ಅವಧಿಯ 144 ಮತ್ತು ಅದಕ್ಕಿಂತಲೂ ಮೇಲ್ಪಟ್ಟ ಅವಧಿಯ ವಿಚಾರಣೆಗಳು ಮುಗಿಯದ ಪ್ರಕರಣಗಳ ಸಂಖ್ಯೆ 242. ಒಟ್ಟಾರೆಯಾಗಿ 386 ಅರ್ಜಿಗಳು ವರ್ಷಗಳು ಕಳೆದರೂ ಇತ್ಯರ್ಥವಾಗದೆ ನೆನೆಗುದಿಗೆ ಬಿದ್ದಿವೆ. ಇವುಗಳ ಜೊತೆ ಹೊಸ ಹೊಸ ಪ್ರಕರಣಗಳು ದಾಖಲಾಗುತ್ತಲೇ ಇರುತ್ತವೆ.

ಉಪವಿಭಾಗ ಕೇಂದ್ರವಾದ ಮಧುಗಿರಿಯಲ್ಲಿ ಹೆಚ್ಚು ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಕಳೆದ ಆರು ತಿಂಗಳ ಅವಧಿಯಲ್ಲಿ ಮಧುಗಿರಿ ತಾಲ್ಲೂಕಿನಲ್ಲಿ 242 ಅರ್ಜಿಗಳು ಭೂವಿವಾದಗಳಿಗೆ, ಖಾತೆ ತಕರಾರುಗಳಿಗೆ ಮತ್ತಿತರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿವೆ. 1 ವರ್ಷದಿಂದ 2 ವರ್ಷದ ಒಳಗಿನ ಅರ್ಜಿಗಳ ಸಂಖ್ಯೆಯೇ 217 ರಷ್ಟಿದ್ದು, ಎರಡು ವರ್ಷದ ಒಳಗಿನ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ 62 ರಷ್ಟಿದೆ. ಮೂರುವರ್ಷಕ್ಕಿಂತ ಮೇಲ್ಪಟ್ಟು ವಿಚಾರಣೆಯಾಗದೆ ಉಳಿದಿರುವ ಪ್ರಕರಣಗಳ ಸಂಖ್ಯೆಯೂ ಕೂಡಾ 99 ರಷ್ಟಿದ್ದು, ಒಟ್ಟಾರೆಯಾಗಿ 620 ಪ್ರಕರಣಗಳು ಇತ್ಯರ್ಥವಾಗದೆ ಉಳಿದಿವೆ.

ಪಾವಗಡ ತಾಲ್ಲೂಕಿನಲ್ಲಿ ಇತ್ಯರ್ಥವಾಗದೆ ಉಳಿದಿರುವ ಒಟ್ಟು ಪ್ರಕರಣಗಳು 463. ಸದಾ ಬರಗಾಲ ಕಾಡುತ್ತಿದ್ದರೂ ಭೂವಿವಾದಗಳಿಗೇನೂ ಬರವಿಲ್ಲ. ಅಂತರ್ಜಾಲದ ಅಂಕಿ >>> 7ನೇ ಪುಟಕ್ಕೆ

**ತಹಸೀಲ್ದಾರರ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿವರ**

| ತಾಲ್ಲೂಕು | ವಿಚಾರಣೆಗೆ ಬಾಕಿ |
|---|---|
| ತುಮಕೂರು | 468 |
| ಗುಬ್ಬಿ | 116 |
| ಕುಣಿಗಲ್ | 386 |
| ತಿಪಟೂರು | 232 |
| ತುರುವೇಕೆರೆ | 381 |
| ಚಿ.ನಾ.ಹಳ್ಳಿ | 231 |
| ಮಧುಗಿರಿ | 620 |
| ಕೊರಟಗೆರೆ | 97 |
| ಶಿರಾ | 461 |
| ಪಾವಗಡ | 463 |
| ಒಟ್ಟು | 3455 |

# ತಾ.ಪಂ.ಸಾಮಾನ್ಯ ಸಭೆ

ತಿಪಟೂರು
ನವೆಂಬರ್ 2017 ರ ಅಂತ್ಯಕ್ಕೆ ಸಾಧಿಸಿದ ವಿವಿಧ ಇಲಾಖೆಗಳ ಪ್ರಗತಿ ಚರ್ಚಿಸಲು ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ತಾ.ಪಂ. ಅಧ್ಯಕ್ಷ ನ್ಯಾಕೇನಹಳ್ಳಿ ಸುರೇಶ್ ಅಧ್ಯಕ್ಷತೆಯಲ್ಲಿ ತಾಲ್ಲೂಕು ಪಂಚಾಯತಿ ಸಭೆ ಕರೆಯಲಾಗಿತ್ತು.

ಅನ್ಯ ಕೆಲಸಗಳ ನಿಮಿತ್ತ ಸಭೆಗೆ ಶಾಸಕರು ಬರುವುದು ತಡವಾಯಿತು. ಸಭೆ ಪ್ರಾರಂಭದ ಸೂಚನೆಯನ್ನು ನೀಡದೆ ನಾಡಗೀತೆ ಕ್ಯಾಸೆಟ್ ಹಾಡಲು ಶುರುವಾದಾಗ ಅಧಿಕಾರಿಗಳು ತಾ.ಪಂ. ಸದಸ್ಯರು ಗಲಿಬಿಲಿಗೊಂಡರು.

ಸ್ಥಾಯಿ ಸಮಿತಿ ಅಧ್ಯಕ್ಷ ಮಣಕೀಕೆರೆ ರವಿಕುಮಾರ್ ಆಕ್ಷೇಪಿಸಿದಾಗ ಸ್ವಾಗತ ಮಾಡಿ ಮತ್ತೆ ನಾಡಗೀತೆ ಹಾಕಿದರು. ನಾಡಗೀತೆ ಅರ್ಧದಿಂದ ಪ್ರಾರಂಭವಾಯಿತು. ಮತ್ತೆ ಸಭೆಯಲ್ಲಿ ಗಂಭೀರವಾದ ಗದ್ದಲ ಉಂಟಾಗುವುದರೊಳಗೆ ಶಾಸಕರು ಬಂದರು.

ಸ್ಪೀಕರ್ ಮೈಕ್ ಮತ್ತು ಮೊಬೈಲ್‌ಗಳಲ್ಲಿ ನಾಡಗೀತೆ ಕಲಸಿ ಹೋಯಿತು. ಗೌರವದಿಂದ ಎದ್ದುನಿಂತು ಹಾಡಬೇಕಾದ >>> 7ನೇ ಪುಟಕ್ಕೆ

REQUIRED
Chemist :
B.Sc. or M.Sc. or B.Tech (Chemical)
Experience 0 to 3 years.
Salary - Rs.15,000 to 40,000 per month.
Contact : 9900011622
Please send SMS first before calling.
Apkon Green Energy
Garden Road, Tumkur.